ಉ) ಈ ಡಿಪೋ ಲಾಭದಲ್ಲಿ ಇದೆಯೇ?

ಶ್ರೀ ಸಿ.ಆರ್. ಸಗೀರ್ ಅಹ್ಮದ್ (ಸಾರಿಗೆ ಸಚಿವರು) :

ಅ) ಒಂದು.

ಆ) ಹೌದು.

ಇ) ಕ.ರಾ.ರ.ಸಾ. ಸಂಸ್ಥೆಯು ತಾಂತ್ರಿಕ ಆಧಾರದ ಮೇಲೆ ಮದ್ದೂರಿನಲ್ಲಿ ಘಟಕ ಒಂದನ್ನು ಸ್ಥಾಪಿಸಲು ಉದ್ದೇಶಿಸಿದ್ದು, ಇದಕ್ಕಾಗಿ ಸೂಕ್ತ ಜಾಗವನ್ನು ನೀಡುವಂತೆ ತೋಟಗಾರಿಕೆ ಇಲಾಖೆಯವರನ್ನು ನೀಡುವಂತೆ ತೋಟಗಾರಿಕೆ ಇಲಾಖೆಯವರನ್ನು ಕೋರಲಾಗಿದೆ. ಮಳವಳ್ಳಿಯಲ್ಲಿ ಘಟಕವನ್ನು ಪ್ರಾರಂಭಿಸಲು ಏಳು ಎಕರೆ ಜಾಗವನ್ನು ಪಡೆಯಲಾಗಿದ್ದು. ಇದು ಕೆರೆ ಅಂಗಳ ಆಗಿರುವುದರಿಂದ ಇಲ್ಲಿ ಘಟಕ ನಿರ್ಮಿಸುವುದು ಸೂಕ್ತವಲ್ಲ ಎಂದು ಕಂಡುಬಂದಿದೆ. ಮದ್ದೂರಿನಲ್ಲಿ ಘಟಕ ಕಾರ್ಯಾರಂಭ ಮಾಡಿದಲ್ಲಿ ಮಳವಳ್ಳಿಯಲ್ಲಿ ಘಟಕ ನಿರ್ಮಿಸುವ ಅವಶ್ಯಕತೆ ಬಗ್ಗೆ ಪರಿಶೀಲಿಸಲಾಗುವುದು. ಕೆ.ಆರ್. ಪೇಟೆಯಲ್ಲಿ ಘಟಕ ನಿರ್ಮಿಸಲು ಪಡೆದುಕೊಂಡಿರುವ ಜಾಗವು ಸೂಕ್ತವಾಗಿರುವುದಿಲ್ಲ, ನಾಗಮಂಗಲದಲ್ಲಿ ಘಟಕ ನಿರ್ಮಿಸುವ ಸಲುವಾಗಿ ಯಾವುದೇ ಜಾಗವು ಲಭ್ಯವಿರುವುದಿಲ್ಲವೆಂಬುದಾಗಿ ತಾಲ್ಲೂಕಿನ ತಹಶೀಲ್ದಾರ್‌ರವರು ತಿಳಿಸಿರುತ್ತಾರೆ.

ಈ) ಮಂಡ್ಯ ಘಟಕವನ್ನು ದಿನಾಂಕ 01-05-1989 ರಂದು ಪ್ರಾರಂಭಿಸಲಾಯಿತು.

ಉ) ಹೌದು.

ರಾಜ್ಯದಲ್ಲಿ ಎ.ಪಿ.ಎಂ.ಸಿ. ಗಳ ವತಿಯಿಂದ ರೈತರಿಗೆ ನೀಡುವ ಸೌಲಭ್ಯ

2980 - ಶ್ರೀ ಆತ್ಮಾನಂದ ಎಂ.ಎಸ್. (ಮಂಡ್ಯ) : ಮಾನ್ಯ ಕೃಷಿ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಒಟ್ಟು ಎಷ್ಟು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಿವೆ?

ಆ) ಈ ಮಾರುಕಟ್ಟೆ ಸಮಿತಿಗಳಿಂದ ಮಾರುಕಟ್ಟೆ ಶುಲ್ಕ ವಸೂಲಾತಿಯಿಂದ ಎಷ್ಟು ಹಣ ಸಂದಾಯವಾಗಿರುತ್ತದೆ?

ಇ) ಎಪಿಎಂಸಿ ವತಿಯಿಂದ ರೈತರಿಗೆ ನೀಡುತ್ತಿರುವ ಸೌಲಭ್ಯಗಳು ಯಾವುವು?

ಈ) ಎಪಿಎಂಸಿ ಮಾರುಕಟ್ಟೆಯಾರ್ಡ್‌ನಲ್ಲಿ ರೈತರ ಉತ್ಪನ್ನಗಳನ್ನು ತೂಕ ಮಾಡಲು ಎಲೆಕ್ಟ್ರಾನಿಕ್ ತೂಕದ ಯಂತ್ರಗಳನ್ನು ಅಳವಡಿಸಲಾಗಿದೆಯೆ?

ಶ್ರೀ ಆರ್.ಬಿ. ತಿಮ್ಮಾಪುರ್ : (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು)

ಅ) 139.

ಅ) ಕಳೆದ ಮೂರು ವರ್ಷಗಳಲ್ಲಿ ವಸೂಲಾದ ಮಾರುಕಟ್ಟೆ ಶುಲ್ಕದ ವಿವರ ಈ ಕೆಳಕಂಡಂತಿದೆ.

ವರ್ಷ	ಮಾರುಕಟ್ಟೆ ಶುಲ್ಕ ರೂ.ಗಳಲ್ಲಿ
1997-98	5931-00
1998-99	7053-00
1999-2000	7338-00

ಆ) ಅಭಿವೃದ್ಧಿಪಡಿಸಿದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳ ಪ್ರಾಂಗಣಗಳಲ್ಲಿ ಈ ಕೆಳಕಂಡ ಪ್ರಮುಖ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ.

ರೈತಭವನ, ಹರಾಜುಕಟ್ಟೆಗಳು, ದಾಸ್ತಾನು ಮಳಿಗೆಗಳು, ಉಪಹಾರ ಗೃಹ, ಶೌಚಾಲಯಗಳು, ಶೈತ್ಯಾಗಾರ, ಸಂಪರ್ಕ ರಸ್ತೆಗಳು, ಕಣಗಳ ನಿರ್ಮಾಣ, ಅಂಚೆ ಕಛೇರಿ ಮತ್ತು ಬ್ಯಾಂಕ್ ಭದ್ರತಾ ವ್ಯವಸ್ಥೆ, ಪ್ರಾಂಗಣದ ಸ್ವಚ್ಛತೆ ಕುಡಿಯುವ ನೀರು, ತೂಕದ ಯಂತ್ರ. ರೈತ ಸಂಜೀವಿನಿ ಯೋಜನೆ, ಅಡಮಾನ ಸಾಲ ಯೋಜನೆ, ಫ್ಲೋರ್ ಪ್ರೆಸ್ ಯೋಜನೆ, ರೈತರ ತರಬೇತಿ ಹಾಗೂ ಆಯ್ದ ಮಾರುಕಟ್ಟೆಗಳಲ್ಲಿ ರೈತರ ಉತ್ಪನ್ನಗಳ ಸಾಗಾಣಿಕೆಗಾಗಿ ವಾಹನಗಳನ್ನು ಒದಗಿಸುವುದು ಮತ್ತು ನ್ಯೂಸ್ ನೆಟ್ ಮೂಲಕ ಪ್ರಮುಖ ಮಾರುಕಟ್ಟೆಗಳ ಧಾರಣೆ ಬಿತ್ತರ ಮಾಡುವುದು.

ಈ) ವಿವಿಧ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿ 136 ಎಲೆಕ್ಟ್ರಾನಿಕ್ ತೂಕದ ಯಂತ್ರಗಳನ್ನು ಅಳವಡಿಸಲಾಗಿದೆ.

ಗುಲ್ಬರ್ಗಾ ಹಾಗೂ ಯಾದಗಿರಿ ಡಿಪೋ ಬಸ್ಸುಗಳು ಸಮಯಕ್ಕೆ ಸಂಚರಿಸುವ ವ್ಯವಸ್ಥೆ

2981 -ಶ್ರೀ ಬಸವಂತರೆಡ್ಡಿ ಮೊತಕಪಲ್ಲಿ (ಸೇಡಂ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಗುಲ್ಬರ್ಗಾ ಹಾಗೂ ಯಾದಗಿರಿ ಡಿಪೋ ಬಸ್ಸುಗಳು ಸೇಡಂ ಕ್ಷೇತ್ರದ ರಸ್ತೆಗಳ ಮೇಲೆ ತಿಂಗಳಾನುಗಟ್ಟಲೆ ಸಮಯಕ್ಕೆ ಸರಿಯಾಗಿ ಸಂಚರಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?*

ಆ) *ಗುಲ್ಬರ್ಗಾ ಡಿಪೋ ಬಸ್ಸು ಸೇಡಂ ಹಂದರಿಕಿ ರಸ್ತೆಯ ಮೇಲೆ ಬೆನಕನಹಳ್ಳಿ ಮಾರ್ಗವಾಗಿ ಹೋಗುವ ಬಸ್ಸು ಜೂನ್‌ದಿಂದ ಇಲ್ಲಿಯವರೆವಿಗೂ ಸಂಚರಿಸಿರುವ ದಿನಗಳು ಎಷ್ಟು? ಇದೇ ಪ್ರಕಾರ ಯಾದವಗಿರಿ ಡಿಪೋ ಬಸ್ಸು ಭೀಮನಹಳ್ಳಿ ಮಾರ್ಗವಾಗಿ ಬೆಳಗೇರಾ ಯಾಗಾಪೂರಿಗೆ ಜೂನ್‌ದಿಂದ ಇಲ್ಲಿಯವರೆಗೆ ಸಂಚರಿಸಿದ ದಿನಗಳು ಎಷ್ಟು?*